ವಿಷಯ: ಸುರತ್ಕಲ್ ಕ್ಷೇತ್ರದ ಮಧ್ಯಗ್ರಾಮದಲ್ಲಿ ದಲಿತಬಂಧುಗಳಿಗೆ ನಿರ್ಮಿಸಿರುವ ಮನೆಗಳು.

2637 (2918)

ಶ್ರೀ ಕುಂಬ್ಳೆ ಸುಂದರ್‌ರಾವ್ (ಸುರತ್ಕಲ್): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುರತ್ಕಲ್ ಕ್ಷೇತ್ರದ ಮಧ್ಯ ಗ್ರಾಮದಲ್ಲಿ ದಲಿತ ಬಂಧುಗಳಿಗಾಗಿ ನಿರ್ಮಾಣಗೊಂಡ ಮನೆಗಳೆಷ್ಟು? ಆ ಮನೆಗಳ ಕೆಲಸ ಪೂರ್ಣವಾಗಿದೆಯೆ?

ಆ) ಸದ್ರಿ ಮನೆಗಳಿಗೆ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆಯೇ? ಅದರಲ್ಲಿ ಎಷ್ಟು ಮನೆಗಳನ್ನು ಅವರಿಗೆ ವಹಿಸಿ ಕೊಡಲಾಯಿತು?

ಇ) ಸದ್ರಿ ಮನೆಗಳಲ್ಲಿ ಸಂಬಂಧಪಟ್ಟವರು ವಾಸವಾಗಿದ್ದಾರೆಯೇ? ಇವರನ್ನು ಖಾಲಿ ಮಾಡಿಸಿ ಫಲಾನುಭವಿಗಳಿಗೆ ಯಾವಾಗ ಮನೆವಹಿಸಿ ಕೊಡಲಾಗುವುದು?

ಶ್ರೀ ಹೆಚ್. ಡಿ. ರೇವಣ್ಣ (ವಸತಿ ಸಚಿವರು):

ಅ) ಒಟ್ಟು 50 ಮನೆಗಳನ್ನು ನಿರ್ಮಾಣ ಮಾಡಲಾಗಿದೆ.

ಆ) ಫಲಾನುಭವಿಗಳಿಗೆ ಆಯ್ಕೆ ಮಾಡಲಾಗಿದ್ದು, ಫಲಾನುಭವಿಗಳು ಪ್ರವೇಶಿಸುವ ಮೊದಲೇ ಅನಧಿಕೃತವಾಗಿ ಬೇರೆಯವರು ಆಕ್ರಮಿಸಿರುತ್ತಾರೆ.

ಇ) ಅನಧಿಕೃತವಾದ ಮನೆಯನ್ನು ಖಾಲಿ ಮಾಡಿಸಲು ಸುರತ್ಕಲ್ ಪುರಸಭೆಯವರು ಕ್ರಮ ವಹಿಸಿರುವರು.

ವಿಷಯ: ಸುರತ್ಕಲ್ ಕ್ಷೇತ್ರದ ಕೃಷ್ಣಾಪುರದ ಬಳಿ ನಿರ್ಮಾಣಗೊಂಡ ಜನತಾ ಮನೆಗಳು.

2638 (2919)

ಶ್ರೀ ಕುಂಬ್ಳೆ ಸುಂದರ್‌ರಾವ್ (ಸುರತ್ಕಲ್): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಸುರತ್ಕಲ್ಲು ಕ್ಷೇತ್ರದ ಕೃಷ್ಣಾಪುರದ ಬಳಿ ನಿರ್ಮಾಣಗೊಂಡ ಜನತಾ ಮನೆಗಳೆಷ್ಟು?

ಆ) ಆ ಮನೆಗಳ ನಿರ್ಮಾಣವು ಯಾವಾಗ ಆರಂಭವಾಯಿತು; ಅವುಗಳ ನಿರ್ಮಾಣ

ಕಾರ್ಯ ಪೂರ್ಣಗೊಳ್ಳದಿರುವುದು ನಿಜವೇ?

ಇ) ಈ ಮನೆಗಳನ್ನು ಎಷ್ಟು ಜನರಿಗೆ ವಿತರಿಸಲಾಗಿದೆ; ಅವರುಗಳು ಅಲ್ಲಿ ವಾಸವಾಗಿದ್ದಾರೆಯೇ?

ಈ) ಸದರಿ ಮನೆಗಳಲ್ಲಿ ಸಂಬಂಧ ಇಲ್ಲದ ವ್ಯಕ್ತಿಗಳು ವಾಸವಾಗಿದ್ದಲ್ಲಿ ಸರಕಾರವು ಏನು ಕ್ರಮ ಕೈಗೊಳ್ಳುವುದು?

ಶ್ರೀ ಹೆಚ್. ಡಿ. ರೇವಣ್ಣ (ವಸತಿ ಸಚಿವರು):

ಅ) ದಕ್ಷಿಣ ಕನ್ನಡ ಜಿಲ್ಲೆಯ ಸುರತ್ಕಲ್ ಕ್ಷೇತ್ರದ ಕೃಷ್ಣಾಪುರ ಬಳಿ ಒಟ್ಟು 54 ನಿರ್ಮಾಣಗೊಂಡ ಜನತಾ ಮನೆಗಳಲ್ಲಿ 26 ಮನೆಯನ್ನು ಕರ್ನಾಟಕ ಗೃಹ ಮಂಡಳಿಯವರು ಮತ್ತು 28 ಮನೆಯನ್ನು ಪುರಸಭೆ ಸುರತ್ಕಲ್ ಇವರು ಕಟ್ಟಿರುತ್ತಾರೆ.

ಆ) ಸದರಿಮನೆಗಳು 1992-93ರಿಂದ 1993-94ರ ಅವಧಿಯಲ್ಲಿ ಆರಂಭವಾಯಿತು. ಅವುಗಳ ನಿರ್ಮಾಣ ಕಾರ್ಯ ಪೂರ್ಣಗೊಂಡಿರುತ್ತದೆ.

ಇ) ಎಲ್ಲಾ ಮನೆಗಳನ್ನು ವಿತರಿಸಲಾಗಿದೆ, 5 ಕುಟುಂಬಗಳು ಮಾತ್ರ ಅಧಿಕೃತ ವಾಸವಾಗಿರುವುದು ಉಳಿದವರು ಅನಧಿಕೃತವಾಗಿ ವಾಸವಾಗಿದ್ದಾರೆ.

ಈ) ಅನಧಿಕೃತವಾಗಿ ವಾಸವಾಗಿರುವವರನ್ನು ಖಾಲಿ ಮಾಡಿಸಲು ಪುರಸಭೆ ಸುರತ್ಕಲ್ ಇವರು ಕ್ರಮ ವಹಿಸಿರುವರು.

ವಿಷಯ: ಬೆಳಗಾವಿ ಜಿಲ್ಲೆ ಕ.ರಾ.ರ.ಸಾ. ಸಂಸ್ಥೆಯ ಘಟಕಗಳ ಅಧಿಸೂಚಿ ರದ್ದತಿ ಕುರಿತು.

2639 (2938)

ಶ್ರೀ ಮಹಾಂತೇಶ ಕೌಜಲಗಿ (ಬೈಲಹೊಂಗಲ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಘಟಕಗಳ ಸಂಖ್ಯೆ ಎಷ್ಟು?

ಆ) ಪ್ರತಿಯೊಂದು ಘಟಕಗಳಲ್ಲಿ ಎಷ್ಟು ಅನುಸೂಚಿಗಳ ಕಿ.ಮೀ. ಪ್ರತಿದಿನ ರದ್ದಾಗುತ್ತವೆ. ಹಾಗೂ ಇದರ ಘಟಕವಾರು ಶೇಕಡಾ ಎಷ್ಟು ಆಗುತ್ತದೆ.

ಇ) ಬೆಳಗಾವಿ ಜಿಲ್ಲೆ ಬೈಲಹೊಂಗಲದ ಘಟಕದಲ್ಲಿ ಅತೀ ಹೆಚ್ಚಿನ ಅನುಸೂಚಿ ಕಿ.ಮಿ.